**ಸಾಕ್ಷಿಯನ್ನು ದಿನಾಂಕ 02.09.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಕೆ ವಕೀಲರಿಂದಃ**

1. ನನ್ನ ಗಂಡ ಪರಮೇಶ್ವರಪ್ಪ ವಾದಿಯ ಗಂಡ ಗೋರ್ಕಪ್ಪ ಅಣ್ಣ-ತಮ್ಮಂದಿರು ಎಂದರೆ ಸಾಕ್ಷಿ ಅವರಿಬ್ಬರು ತಂದೆ-ಮಗ ಎನ್ನುತ್ತಾರೆ. ನಮ್ಮ ಮತ್ತು ಪ್ರತಿವಾದಿಯ ಕುಟುಂಬದ ನಡುವೆ ಎಷ್ಟು ವ್ಯಾಜ್ಯ ನಡೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಜಮೀನಿನ ವಿಚಾರವಾಗಿ ನಮ್ಮ ಕುಟುಂಬಗಳ ನಡುವೆ ಹಲವಾರು ವರ್ಷಗಳಿಂದ ನ್ಯಾಯಾಲಯದಲ್ಲಿ ವ್ಯಾಜ್ಯ ಮತ್ತು ಪೊಲೀಸ್ ದೂರು ದಾಖಲಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ದಿನಾಂಕ 03.01.2018 ರಂದ ನನ್ನ ಹಾಗೂ ನನ್ನ ಮಕ್ಕಳ ವಿರುದ್ಧ ಹೊಳೆಹೊನ್ನೂರು ಪೊಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಜಮೀನಿನಲ್ಲಿ ಸಾಗುವಳಿ ಮಾಡಲು ನಾವು ತೊಂದರೆ ಕೊಟ್ಟಿರುವುದಾಗಿ ಆಕೆ ನಮ್ಮ ವಿರುದ್ಧ ಸದರಿ ದೂರು ಸಲ್ಲಿಸಿದ್ದರು ಎಂದರೆ ಸರಿ.

2. 1 ನೇ ಪ್ರತಿವಾದಿ ಜಮೀನಿನ ವಿಚಾರವಾಗಿ ನನ್ನ ವಿರುದ್ಧ ದಾವೆ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನಾನು ನ್ಯಾಯಾಲಯಕ್ಕೆ ಬಂದಿಲ್ಲ ನನ್ನ ಗಂಡನಿಗೆ ಗೊತ್ತು ಎನ್ನುತ್ತಾರೆ. ನನ್ನ ಗಂಡ ಜಮೀನಿನ ವಿಚಾರವಾಗಿ ಕೇಸು ದಾಖಲಾಗಿತ್ತು ಎಂದು ಹೇಳುತ್ತಿದ್ದರು.

3. 1 ನೇ ಪ್ರತಿವಾದಿಯ ಜಮೀನಿನ ಪೂರ್ವ ದಿಕ್ಕಿಗೆ ನಮ್ಮ ಜಮೀನು ಇದೆ ಎಂದರೆ ಸರಿ. ವಾದಿ ಮತ್ತು ಆಕೆಯ ಕುಟುಂಬದ ಸದಸ್ಯರಾದ ನೀವವು ಮತ್ತು ಇತರರು ನಿಮ್ಮ ಕುಟುಂಬದ

ಆಸ್ತಿಗಳನ್ನು ಯಾವಾಗ ವಿಭಾಗ ಮಾಡಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾವು ವಿಭಾಗ ಮಾಡಿಕೊಂಡಿಲ್ಲ ಎಲ್ಲ ಒಟ್ಟಿಗೆ ಇದ್ದೇವೆ ಎನ್ನುತ್ತಾರೆ. ವಾದಿಯ ಗಂಡ ಗೋರ್ಕಪ್ಪನಿಗೆ 1 ಎಕರೆ 20 ಗುಂಟೆ ಆಸ್ತಿ ಇದೆ. ನನ್ನ ಗಂಡನ ಹೆಸರಿಗೂ ಸಹ 1 ಎಕರೆ 20 ಗುಂಟೆ ಆಸ್ತಿ ಇದೆ. ಗೋರ್ಕಪ್ಪರವರ ಆಸ್ತಿಯನ್ನು ನನ್ನ ಮೈದುನಾಂದಿರು ಅನುಭವಿಸುತ್ತಿದ್ದಾರೆ.

4. ದಾವಾ ಸ್ವತ್ತಿನ ಚಕ್ಕುಬಂಧಿ ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ಸಂಬಂಧಪಟ್ಟ ದಾಖಲೆ ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಓದು-ಬರಹ ಬರುವುದಿಲ್ಲ ಎನ್ನುತ್ತಾರೆ. ಯಾವ ಕಾರಣಕ್ಕಾಗಿ ನನ್ನ ಗಂಡ ಅಸಲು ದಾವೆ ಸಂಖ್ಯೆ 308/2019 ರ ದಾವೆ ದಾಖಲಿಸಿದ್ದಾರೆ ಎಂದು ನಾನು ಗಂಡನನ್ನು ಕೇಳಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವ ಕಾರಣಕ್ಕೆ ಗಲಾಟೆ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿ ದಿನಾಂಕ 06.08.2019 ರಂದು ಪ್ರತಿವಾದಿಯರು ನಮ್ಮ ಜಮೀನು ಎಂದು ಗಲಾಟೆ ಮಾಡಿದರು ಎನ್ನುತ್ತಾರೆ. ನಾನು ಈ ದಾವೆಯಲ್ಲಿ ವಾದಿಗೆ ಸಂಬಂಧಪಟ್ಟ ಆಸ್ತಿಯ ವಿಷಯವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ದಾವಾ ಸ್ವತ್ತು 1 ½ ಎಕರೆ ವಿಸ್ತೀರ್ಣ ಇದೆ. ಈ ದಾವೆಯನ್ನು ½ ಎಕರೆ ಜಾಗಕ್ಕೆ ಸಂಬಂಧಪಟ್ಟಂತೆ ದಾಖಲಿಸಲಾಗಿದೆ.

5. ವಾದಿ ಸ್ವಾಧೀನದಲ್ಲಿರುವ ಜಮೀನು ಆಕೆಗೆ ಯಾವ ದಾಖಲೆಯ ಮೂಲಕ ಬಂದಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಆಕೆಯ ಹೆಸರಿಗೆ ಇರುವ ಪಹಣಿ ಮತ್ತು ಇತರೆ ದಾಖಲೆಗಳನ್ನು ನಾನು ನೋಡಿಲ್ಲ. ಸ್ವಾಧೀನ ಇರುವವರಿಗೆ ಪಹಣಿ ಕೊಡುತ್ತಾರೆ ಎಂದರೆ ಸರಿ. ನನ್ನ ಅಕ್ಕ-

ಪಕ್ಕದ ಜಮೀನಿನವರ ಪಹಣಿ ನಾನು ನೋಡಿಲ್ಲ.

6. ನನಗೆ ಈ ದಾವೆ ಬಗ್ಗೆ ಅಥವಾ ದಾವಾ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂಬುವುದರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಹೇಳಿದ್ದನ್ನು ಕೇಳಿಸಿಕೊಂಡಿದ್ದನ್ನು ಹೊರತುಪಡಿಸಿ ಬೇರೇನು ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಸಂಬಂಧಿಯಾಗಿರುವುದರಿಂದ ಮತ್ತು ಪ್ರತಿವಾದಿಯರಿಗೂ ಮತ್ತು ನಮ್ಮ ಕುಟುಂಬಕ್ಕೂ ಹಲವಾರು ವರ್ಷಗಳಿಂದ ದ್ವೇಷ ಇರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ಮತ್ತು ವಾದಿಗ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯೇ ಪ್ರತಿವಾದಿಯರ ಜಮೀನಿನ ಸ್ವಾಧೀನಕ್ಕೆ ತೊಂದರೆ ಕೊಟ್ಟು ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**